## ನಾವೇ ಕೇಳಿದೆವು

ಬೆಪ್ಪೇಶ್, ತಿಪ್ಪೇಶಗುಡಿ
*ರಾಜಕೀಯ ಎಂದರೇನು?*
ಸ್ವಕೀಯ ಎಂದರೆ ಸ್ವಂತದ್ದು; ಪರಕೀಯ ಬೇರೆಯವರದ್ದು; ಪರಕೀಯವನ್ನು ಸ್ವಕೀಯ ಮಾಡಿಕೊಳ್ಳುವುದೇ ರಾಜಕೀಯ!

ಸ್ವಾಮೀಜಿ, ಆನಂದನಗರ
*ರಾಜಕಾರಣಿಗಳ ನಿತ್ಯಾನಂದಕ್ಕೂ, ನಿತ್ಯಾನಂದರ ನಿತ್ಯಾನಂದಕ್ಕೂ ಏನು ವ್ಯತ್ಯಾಸ?*
ಇವರ ನಿತ್ಯಾನಂದಕ್ಕೆ ಕಾರಣ ಆಸ್ತಿ, ಅವರ ನಿತ್ಯಾನಂದಕ್ಕೆ ಕಾರಣ ಮಸ್ತಿ.

ಸಾಯಿಕಲ್ಲಪ್ಪ, ಅರಸರ ಓಣಿ
*ದೇವೇಗೌಡರು ಅಷ್ಟೊಂದು ಸೈಕಲ್ ಹೊಡೆಸಿದಾಗಲೂ ಬೀಳದ ಎಡಿಯೂರಪ್ಪ ಜನಸಾಮಾನ್ಯರ ಸೈಕಲ್ ಹೊಡೆಯುವಾಗ ಬಿದ್ದುದೇಕೆ?*
ಸೈಕಲ್ ತಮ್ಮದೇ ಪಕ್ಷದ ಭಿನ್ನಮತೀಯರದೆಂದು ಹತ್ತಿದ ನಂತರ ತಿಳಿಯಿತಂತೆ!

ದಡ್ಡಣ್ಣ, ಏಪ್ರಿಲ್ ಫೂಲ್‌ನಗರ
*ಪಿಯುಸಿ ಪರೀಕ್ಷೆ ಇರುವಾಗಲೇ ಎಲೆಕ್ಷನ್ ನಡೆಸಲು ಕಾರಣವೇನು?*




ದಡ್ಡರಿಗೆ ಫೇಲ್ ಆದುದಕ್ಕೆ ಒಂದು ಒಳ್ಳೆಯ ಕಾರಣ ಸಿಗಲೆಂದು!

ಡಿಸ್ಕೌಂಟಪ್ಪ, ರಿಯಾಯಿತಿನಗರ
*ಎಲ್ಲಾ ಹಬ್ಬದಲ್ಲೂ ರಿಯಾಯಿತಿ ಕೊಡುವವರು ಏಪ್ರಿಲ್ ಫೂಲ್ ದಿನ ಏಕೆ ರಿಯಾಯಿತಿ ಕೊಡುವುದಿಲ್ಲ?*
ಎಲ್ಲರೂ ಅಂದು ಮಾತ್ರ ಫೂಲ್ ಆಗದಿರಲು ಬಹಳ ಎಚ್ಚರ ವಹಿಸುವುದರಿಂದ ಎಂದನೊಬ್ಬ ಸೇಲಿಗ.

ವಸ್ತ್ರೇಶ್, ಸೂಜೀಪುರ
*ಹೀರೋಯಿನ್‌ನ ಬಟ್ಟೆಗಳು ಹೇಗಿರುತ್ತವೆ?*
ದೇವರಿದ್ದಂತೆ: ಇದೆ ಎಂದರೆ ಇದೆ, ಇಲ್ಲವೆಂದರೆ ಇಲ್ಲ!

ವಿಮಾನೇಶ್, ಆಕಾಶಪುರ
*ಏರೋಪ್ಲೇನ್ ಸೈಕಲ್ ಚಾಲಕನಿಗೆ ಡಿಕ್ಕಿ ಹೊಡೆಯುತ್ತಿತ್ತಂತಲ್ಲಾ..?*



ಅರೆರೆ! ಸೈಕಲ್‌ನವನು ಅಷ್ಟು ಎತ್ತರಕ್ಕೆ ಹಾರಿದ್ದಾದರೂ ಹೇಗೆ?

ಮುಕ್ತಮುಕ್ತ, ಉದಯನಗರ
*ಧಾರವಾಹಿಗಳಿಗೂ ಎಲಾಸ್ಟಿಕ್‌ಗೂ ಏನು ವ್ಯತ್ಯಾಸ?*
ಎಲಾಸ್ಟಿಕ್ಕನ್ನೂ ಬೇಕಾದ ಅಳತೆಗೆ ತುಂಡರಿಸಬಹುದು.

ಅನುಮಾನ್, ಮ್ಯಾಚಿನಹಳ್ಳಿ
*ಕ್ರಿಕೆಟ್ ಹೆಣ್ಣೋ ಗಂಡೋ?*
ಫೈನ್‌ಲೆಗ್, ಲಾಂಗ್‌ಲೆಗ್ ಗಳಿದ್ದು ಗಲ್ಲಿಯಿಂದಾಚೆ ಥರ್ಡ್‌ಮ್ಯಾನ್ ಕದ್ದು ನೋಡುತ್ತಿರುವಾಗ ಅದು ಹೆಣ್ಣೇ!

ಪೂಜಾರಪ್ಪ, ದೇವಪುರ
*ಟ್ಯಾಕ್ಸ್ ಕಟ್ಟುವ ಏಪ್ರಿಲ್ ತಿಂಗಳಲ್ಲೇ ಮೂರ್ಖರ ದಿನಾಚರಣೆ ಆಚರಿಸುವ ಕಾರಣವೇನು?*




ಇಡೀ ಸಮುದಾಯ ಸರ್ಕಾರಕ್ಕೆ ಲೆಕ್ಕಾಚಾರವಾಗಿ ಟೋಪಿ ಹಾಕುವ ತಿಂಗಳು ಅದಾದ್ದರಿಂದ!

ರನ್ನಪ್ಪ, ಬೊಂಬೊಂಬಾಯಿ
*ಸಚಿನ್ ತೆಂಡೂಲ್ಕರ್ ತಮ್ಮ ಎಪ್ಪತ್ತನೆಯ ಹರೆಯದಲ್ಲಿಯಾದರೂ ರಿಟೈರ್ ಆಗುವರೇ?*
ಕ್ರಿಕೆಟ್‌ನಿಂದಲೋ, ಜಾಹಿರಾತಿನಿಂದಲೋ?

ತ್ರಿವಿಕ್ರಮ ದ್ವೈಪನಾಚಾರ್ಯ, ಧಗಧಗ ನಗರ
*ಶ್ರೀಕೃಷ್ಣನು ನಾರಿಯರ ಸೀರೆಯನ್ನು ಕದ್ದದ್ದು ಏಕೆ?*
ರೀಟೇಲ್‌ನಲ್ಲಿ ಸಂಗ್ರಹಿಸಿ ಹೋಲ್‌ಸೇಲಾಗಿ ದ್ರೌಪದಿಗೆ ಸಪ್ಲೈ ಮಾಡಲು!

ಪಕ್ಷಮ್ಮಾಳ್, ದೇವೇಗೌಡನಗರ
*ಕುಮಾರಣ್ಣ ಖಳರು ಚುನಾವಣೆಗೆ ನಿಲ್ಲುವುದರಲ್ಲಿ ತಪ್ಪಿಲ್ಲ ಎಂದಿರುವರಲ್ಲಾ?*
ಭೇಷ್! ತನ್ನಂತೆ ಪರರ ಬಗೆದೊಡೆ ಎಂಬುದನ್ನು ಕೊಚ್ಚಿಹಾಕಿದೊಡೆ ಎಂದು ಅವರು ಅರ್ಥೈಸಿಕೊಂಡಿರುವರಂತೆ.

ಕ್ರಿ-ಕೆಟ್ಟಪ್ಪ, ತೂರಾಡುವ ನಗರ
*ಐಪಿಎಲ್‌ನಲ್ಲಿ ಎಲ್ಲಾ ತಂಡಗಳಿಗಿಂತಲೂ ಹೆಚ್ಚು ಕಷ್ಟ ಯಾವ ತಂಡಕ್ಕೆ?*
ರಾಯಲ್ ಚಾಲೆಂಜರ್ಸ್‌ಗೆ. ಅತ್ತ ನೋಡಿದರೆ ಚಿಯರ್‌ಗರ್ಲ್ಸ್, ಇತ್ತ ನೋಡಿದರೆ ಚಿಯರ್ಸ್ ಪ್ರಚೋದಕ ಬಾಟಲ್ಸ್!

ಮ್ಯಾಜಿಕ್ಕಮ್ಮ, ಇಂದುಚ್ಚೀನಗರ
*ಮಕ್ಕಳು ಮೊಬೈಲ್ ಫೋನನ್ನು ಶಾಲೆಗೆ ತೆಗೆದುಕೊಂಡುಹೋಗುವುದು ಏಕೆ?*



ಸೇವ್ ಪೇಪರ್, ಯೂಸ್ ಮೊಬೈಲ್ ಎಂಬ ಜಾಹೀರಾತಿನ ಪ್ರಭಾವವಂತೆ.

ವಾರ್ಡೇಶ್ವರಿ, ಯುಕ್ತಿನಗರ
*ಎಲೆಕ್ಷನ್ ವಾರ್ಡ್‌ಗೂ, ಆಸ್ಪತ್ರೆಯ ವಾರ್ಡ್‌ಗೂ ಏನು ಸಂಬಂಧ?*
ಎಲೆಕ್ಷನ್ ವಾರ್ಡ್‌ನಲ್ಲಿ ಹಂಚಿದ ಖಾಯಿಲೆಗೆ ಈ ವಾರ್ಡ್‌ನಲ್ಲಿ ಮೋಕ್ಷ!

ರಶ್ಮಿ ಕೇಶವರ್ಧಿನಿ, ಪಾದರಾಯನಪುರ
*ಕಣ್ಣು, ಅಂಗೈ, ಪಾದಗಳಲ್ಲಿ ಕೂದಲು ಏಕೆ ಬೆಳೆಯುವುದಿಲ್ಲ?*
ಚಲನೆ ಹೆಚ್ಚಿದ್ದಲ್ಲಿ ಹುಲ್ಲು ಬೆಳೆಯುವುದಿಲ್ಲ; ಚಾಲನೆ ಹೆಚ್ಚಿದ್ದಲ್ಲಿ ಕೂದಲು ಬೆಳೆಯುವುದಿಲ್ಲ.

■ ರಾಮ್